**ಅಸಲು ದಾವಾ ನಂ:234/2017**
**ಡಿ.ಡಬ್ಲ್ಯೂ: 01/ಲಿಂಗರಾಜು**

**ದಿನಾಂಕ: 01.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಶ್ರೀ ಕೆ.ಎಂ.ಎನ್., ಪ್ರತಿವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ವಿಶೇಷ ಮುಖ್ತ್ಯಾರು ನಾಮೆಯನ್ನು ನಿ.ಡಿ.1 ಅಂತ, ದಿನಾಂಕ.30.03.2017 ರ ರಸೀದಿಯನ್ನು ನಿ.ಡಿ.2 ಅಂತ ಗುರುತಿಸಲಾಯಿತು. ಸಾಕ್ಷಿಯು ನಿ.ಡಿ.2 ರಲ್ಲಿರುವ ವಾದಿ ವೇಣುಗೋಪಾಲ್ ರವರ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳ ಪೈಕಿ ಸ್ಟಾಂಪ್ ನ ಕೆಳಗಡೆ ಇರುವ ಸಹಿಯನ್ನು ನಿ.ಡಿ.2(ಎ) ಅಂತ ಗುರುತಿಸಲಾಯಿತು. ನಿ.ಡಿ.2(ಎ) ನೇದ್ದರ ಕೆಳಗಡೆ ಎಸ್. ವೇಣುಗೋಪಾಲ್ ಅಂತ ಆಂಗ್ಲಭಾಷೆಯಲ್ಲಿ ಬರೆದಿರುವ ಹೆಸರು ಅವರೇ ಸ್ವ ಅಕ್ಷರದಿಂದ ಬರೆದಿರುತ್ತಾರೆ. ಸಾಕ್ಷಿಯು ಸಾಕ್ಷಿದಾರರಾದ ಬಸವರಾಜ್ ಮತ್ತು ಬಿಕ್ಲಮ್ ದಾರರಾದ ವಿಬುಸ್ವಾಮಿ ಇವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ನಿ.ಡಿ.2(ಬಿ) ಮತ್ತು (ಸಿ) ಅಂತ ಗುರುತಿಸಲಾಯಿತು.

**(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.